ಅಜೇಯ

ಆರೋಗ್ಯ

# ಚಿಕಿತ್ಸಾ ಚತುಷ್ಪಾದ–ಚಿಕಿತ್ಸಾ ಸಾಫಲ್ಯಕ್ಕೆ 4 ಮುಖ್ಯ ಅಂಶಗಳು

ಕರೆಯದೇ ಬಂದ ಅತಿಥಿ

ಆಯುರ್ವೇದ ದೃಷ್ಟಿಕೋನದಲ್ಲಿ...



ಡಾ. ಚಿತ್ರಲೇಖಾ ವಿ.ಕೃಷ್ಣ
ಆಯುರ್ವೇದ ವೈದ್ಯೆ,
ಶ್ರೀಸದ್ಗುರು ಚಿಕಿತ್ಸಾಲಯ, ಶಿವಮೊಗ್ಗ
9900212524

ಪ್ರಪಂಚದ ಅತ್ಯಂತ ಪುರಾತನ ವೈದ್ಯ ಪದ್ಧತಿ ಆಯುರ್ವೇದ. ಅದೊಂದು ಸಮಗ್ರ ವೈದ್ಯಪದ್ಧತಿ. ಚಿಕಿತ್ಸೆ ರೋಗಕ್ಕಲ್ಲ ರೋಗಿಗೆ ಎಂದು ನಂಬಿರುವ ಪದ್ಧತಿ. ಆಯುರ್ವೇದ ಮನುಷ್ಯನೊಬ್ಬನನ್ನು ಚಿಕಿತ್ಸೆ ಮಾಡಲು ಲಕ್ಷಣಕ್ಕಿಂತ ಹೆಚ್ಚು ಪ್ರಾಧಾನ್ಯತೆ ಕಾರಣಕ್ಕೆ ನೀಡುತ್ತದೆ. ಏಕೆಂದರೆ ಕಾರಣವಿಲ್ಲದೆ ಯಾವುದೇ ಕಾರ್ಯವಾಗುವುದಿಲ್ಲವೆಂಬ ಕಾರ್ಯ–ಕಾರಣ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಶಾಸ್ತ್ರ.

ಶಸ್ತ್ರಚಿಕಿತ್ಸೆಯಾಗಿರಬಹುದು ಅಥವಾ ವೈದ್ಯಚಿಕಿತ್ಸೆಯಾಗಿರಬಹುದು ಅದರಲ್ಲಿ ಸಫಲತೆ ದೊರಕಬೇಕಾದರೆ ಮುಖ್ಯವಾಗಿ ನಾಲ್ಕು ಅಂಶಗಳು ಸರಿಯಾಗಿ ಕಾರ್ಯ ನಿರ್ವಹಿಸಬೇಕು. ಇಲ್ಲವಾದಲ್ಲಿ ರೋಗಿ ರೋಗದಿಂದ ಮುಕ್ತನಾಗಲು ಅಶಕ್ತ.

ಇದನ್ನು ವಿವರಿಸುವುದೇ 'ಚಿಕಿತ್ಸಾ ಚತುಷ್ಪಾದ'. ಅವೆಂದರೆ 'ಭಿಷಕ್' ಅಂದರೆ ವೈದ್ಯ, 'ದ್ರವ್ಯ', ಔಷಧಗಳು. 'ಉಪಸ್ಥಾತಾ'–ಪರಿಚಾರಕ ವರ್ಗ ಮತ್ತು ರೋಗಿ. ಈ ನಾಲ್ಕೂ ಪಾದಗಳಿಗೂ ನಾಲ್ಕು ಗುಣಗಳನ್ನು ವಿವರಿಸಿದ್ದಾರೆ. ಈ ನಾಲ್ಕು ಪಾದಗಳೂ ನಾಲ್ಕು ಗುಣಗಳಿಂದ ಕೂಡಿದರೆ ಅದನ್ನು 'ಷೋಡಶ ಕಲಾಭೇಷಜ' ಅಂದರೆ 16 ಗುಣಗಳುಳ್ಳ ಔಷಧವೆನ್ನುತ್ತಾರೆ.

**ಭಿಷಕ್/ ವೈದ್ಯನ ಲಕ್ಷಣಗಳು:** ನುರಿತ ತಜ್ಞವೈದ್ಯನಲ್ಲಿ, ಕಲಿತ ಗುರುವಿನೊಡನೆ ಅಭ್ಯಾಸ ಮಾಡಿರಬೇಕು. ಶಾಸ್ತ್ರದ ಮತ್ತು ಪ್ರಾಯೋಗಿಕ ಕರ್ಮಗಳ ಬಗ್ಗೆ ಅನುಭವ ಇರಬೇಕು. ದಕ್ಷ ಮತ್ತು ಚತುರನಾಗಿರಬೇಕು. ಸ್ವಯಂ ಶುಚಿಯಾಗಿದ್ದು ಶುಚಿತ್ವದ ಮಹತ್ವ ತಿಳಿದಿರಬೇಕು.



ಭಾರತೀಯ ಶಸ್ತ್ರ ವೈದ್ಯಪರಂಪರೆಯ ಪಿತಾಮಹ ಆಚಾರ್ಯ ಸುಶ್ರುತ ತನ್ನ ಸಂಹಿತೆಯಲ್ಲಿ ಈ ಲಕ್ಷಣಗಳನ್ನು ಹೊರತು ಪಡಿಸಿ ಕೆಲವು ವಿಶೇಷ ಲಕ್ಷಣಗಳನ್ನು ಶಸ್ತ್ರವೈದ್ಯನಿಗೆಂದೇ ಹೇಳಿದ್ದಾನೆ. ಅವೆಂದರೆ ಶಸ್ತ್ರ ಚಿಕಿತ್ಸಾ ವೈದ್ಯನು ಭಯರಹಿತನಾಗಿರಬೇಕು. ಚುರುಕಿನಿಂದ ಶಸ್ತ್ರಕ್ರಿಯೆಯನ್ನು ಮಾಡುವವನಾಗಿರಬೇಕು. ಹಸ್ತಕೌಶಲ್ಯವಿರಬೇಕು. ವಿವಿಧ ಶಸ್ತ್ರಗಳ ಬಗ್ಗೆ ಸರಿಯಾದ ಜ್ಞಾನವಿರಬೇಕು. ಅವನು ಉಪಯೋಗಿಸುವ ಶಸ್ತ್ರಗಳು ಹರಿತವಾಗಿರಬೇಕು. ಶಸ್ತ್ರಕ್ರಿಯೆ ಮಾಡುವಾಗ ಅವನ ಮೈ ಬೆವರಬಾರದು, ಕೈ ನಡುಗಬಾರದು, ರಕ್ತ ಕೀವುಗಳನ್ನು ನೋಡಿ ತಾನೇ ಮೂರ್ಛೆ ಹೋಗಬಾರದವನಾಗಿರಬೇಕು.

**ದ್ರವ್ಯ–ಔಷಧ ಮತ್ತಿತರ ಪರಿಕರಗಳು:** ಒಂದೇ ಸಸ್ಯ ಅಥವಾ ಬೇರು ಅಥವಾ ಚಕ್ಕೆ ಬೇರೇ ರೀತಿಯಲ್ಲಿ ಉಪಯೋಗಿಸಲು ಬರುವಂತಿರಬೇಕು. **ಉದಾ:** ರಸ, ಕಷಾಯ, ಪುಡಿ ಮುಂತಾದಾಗಿ ಬಳಸಲು ಆಗಬೇಕು. ಔಷಧ ಅನೇಕ ಗುಣಗಳಿಂದ ಕೂಡಿದ್ದು, ರೋಗ ನಿರ್ಮೂಲನ ಮಾಡುವ ಸಾಮರ್ಥ್ಯದ್ದಾಗಿರಬೇಕು. ಅದಕ್ಕೆ ಶಾಸ್ತ್ರದಲ್ಲಿ ತಿಳಿಸಿರುವಂತೆ ರಸ–ಗುಣ–ವೀರ್ಯ–ವಿಪಾಕ ಉಳ್ಳದ್ದಾಗಿರಬೇಕು. ಇಷ್ಟೇ ಅಲ್ಲದೇ ವ್ಯಾಧಿ, ದೇಶ, ಕಾಲ, ವಯಸ್ಸು, ದೋಷ, ದೂಷ್ಯ, ದೇಹ ಮತ್ತು ಬಲಾಬಲಕ್ಕೆ ಅನುಸಾರ ರೋಗಿಗೆ ಹಿತವಾಗಿರಬೇಕು.

**ಉಪಸ್ಥಾತಾ–ಪರಿಚಾರ ವರ್ಗ:** ರೋಗಿಯ ಬಗ್ಗೆ ಅನುರಕ್ತರಾಗಿರಬೇಕು. ಸ್ವಯಂ ಶುಚಿಯಾಗಿದ್ದು, ಶುಚಿಯ ಮಹತ್ವ ತಿಳಿದಿರಬೇಕು. ತನ್ನ ಕೆಲಸ ಕಾರ್ಯಗಳಲ್ಲಿ ದಕ್ಷರಾಗಿರಬೇಕು. ವೈದ್ಯರು ತಿಳಿಸಿದ್ದನ್ನು ಚಾಚೂತಪ್ಪದೇ ಪಾಲಿಸಬೇಕು ಮತ್ತು 'ಪ್ರತ್ಯುತ್ಪನ್ನ ಮತಿತ್ವ' ಉಳ್ಳವರಾಗಿರಬೇಕು.

**ರೋಗಿ:** ಚಿಕಿತ್ಸೆಗೆ ಒದಗುವಷ್ಟು ಹಣ ಉಳ್ಳವರಾಗಿರಬೇಕು. ವೈದ್ಯರು ಹೇಳಿದ್ದನ್ನು ಶ್ರದ್ಧೆಯಿಂದ ಪಾಲಿಸುವವರಾಗಿರಬೇಕು. ನೆನಪಿನ ಶಕ್ತಿ ಉಳ್ಳವರಾಗಿರಬೇಕು ಮತ್ತು ನಾನಾ ರೀತಿಯ ಚಿಕಿತ್ಸೆ ಪಥ್ಯಗಳನ್ನು ಪಾಲಿಸಲು ಅಂತಃಸತ್ವ ಉಳ್ಳವರಾಗಿರಬೇಕು.

ಈ ನಾಲ್ಕೂ ಪಾದಗಳು ಸರಿಯಾಗಿದ್ದರೆ ಚಿಕಿತ್ಸೆ ಸಫಲವಾಗುವುದು. ಯಾವುದೇ ಒಂದು ಪಾದವು ಸಮರ್ಥವಿಲ್ಲವಾದಲ್ಲಿ ಸಂಪೂರ್ಣ ಯಶಸ್ಸು ದೊರಕುವುದಿಲ್ಲ. ಅತಂಹ ಸಂದರ್ಭಗಳಲ್ಲಿ ದೂಷಣೆ ಅನುಭವಿಸೋದು ವೈದ್ಯರೆ ವಿನಃ ಬೇರೆ ಯಾರು ಅಲ್ಲ. ಎಲ್ಲರು ತಮ್ತಮ್ಮ ಜವಾಬ್ದಾರಿ ಅರಿತರೆ ದೂಷಿಸುವ ಘಟಣೆಯಿರುವುದಿಲ್ಲ. ಸ್ವಯಂ ವೈದ್ಯ(self medication) ಹಾಗೂ ಔಷಧದ ಅಂಗಡಿಯಿಂದ ನೇರ ಔಷಧಕೊಂಡು ಸೇವಿಸುವವರು ಯೋಚಿಸಬೇಕಾದ ಅಂಶಗಳಿವು.